SC/ST No.9-2020
ಪಿಡಬ್ಲ್ಯೂ-2
ದಿಃ 07-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.
ಪಾಟೀಸವಾಲುಃ ಆರೋಪಿ ಪರ ವಕೀಲರಿಂದ.

ನಾನು ಬಿಇ ವ್ಯಾಸಂಗ ಮಾಡಿರುತ್ತೇನೆ. ನಾನು ಈಗ ಬೆಸ್ಕಾಂ ನಲ್ಲಿ ಕಿರಿಯ ಅಭಿಯಂತರನಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಕೆಲಸವು ನನಗೆ ಅನುಕಂಪದ ಆಧಾರದ ಮೇರೆಗೆ ದೊರೆತಿರುತ್ತದೆ ಎಂದರೆ ಸರಿ. ನನ್ನ ತಂದೆಯು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಎಂದರೆ ಸರಿ. ಅದೇ ರೀತಿ ಆರೋಪಿತನು ಬಿಜೆಪಿ ಪಕ್ಷದ ಕಾರ್ಯಕರ್ತ ಎಂದರೆ ಸರಿ.

ಸಹಜವಾಗಿ ಚುನಾವಣೆ ನಡೆಯುವಾಗ ಚುನಾವಣೆ ಬೂತ್ ನಿಂದ 100 ಮೀಟರ್ ವರೆಗೆ ಯಾವುದೇ ವ್ಯಕ್ತಿಗಳು ಪರವಾನಿಗೆ ಇಲ್ಲದೇ ಒಳಗೆ ಹೋಗುವಂತಿಲ್ಲ ಎಂದು ನಿರ್ಬಂಧ ಹಾಕಲಾಗುತ್ತದೆ ಎಂದರೆ ಸರಿ. ನಮ್ಮ ಮನೆಯ ಎದುರು ಚುನಾವಣಾ ಬೂತ್ ಇತ್ತು ಎಂದರೆ ಸರಿ. ನಮ್ಮ ಮನೆಯು ಸದರಿ 100 ಮೀಟರ್ ನಿರ್ಭಂಧಿತ ಪ್ರದೇಶದ ಒಳಗಡೆ ಬರುತ್ತಿತ್ತು ಎಂದರೆ ಸರಿಯಲ್ಲ. ಸಹಜವಾಗಿ ಚುನಾವಣಾ ಬೂತ್ ಗಳ ಸಮೀಪ ಯಾವುದೇ ಅನಧಿಕೃತ ಕೆಲಸಗಳು ಆಗಬಾರದು ಎಂದು ತಡೆಯಲು ಪೋಲೀಸರನ್ನು ನೇಮಕ ಮಾಡಲಾಗುತ್ತದೆ ಎಂದರೆ ಸರಿ. ಸದರಿ 100 ಮೀಟರ್ ಒಳಗಡೆ ಯಾವುದಾದರೂ ಸಾರ್ವಜನಿಕರು ಗುಂಪುಗೂಡಿ ನಿಂತಲ್ಲಿ ಪೋಲೀಸರು ಆ ರೀತಿಯಾಗಿ ನಿಲ್ಲದಂತೆ ಜಾಗ್ರತೆ ವಹಿಸುತ್ತಾರೆ ಎಂದರೆ ಸರಿ.

ಚಾ.ಸಾ.2, 3 ಮತ್ತು 4 ನಮ್ಮ ಪರಿಚಯಸ್ಥರು ಎಂದರೆ ಸರಿ. ಅಲ್ಲದೇ ನಮ್ಮ ಕುಲಸ್ಥರು ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿತನು ಅಪರಾಧ ಮಾಡಿದ್ದಾನೆ ಎಂದು ಹೇಳಿದ ತತಕ್ಷಣ ನನ್ನ ತಂದೆ ಪೋಲೀಸರಿಗೆ ಈ ಕುರಿತು ಮಾಹಿತಿಯನ್ನು ನೀಡಿರುತ್ತಾರೆ. ನಮ್ಮ ಮನೆಯಲ್ಲಿ ಅಳವಡಿಸಲಾದ ಸಿಸಿ ಟಿವಿಯಲ್ಲಿ ವಾಯಿಸ್ ರೆಕಾರ್ಡಿಂಗ್ ಸೌಲಭ್ಯ ಇರುವುದಿಲ್ಲ. ಸದರಿ ದಿನ ನಾನು ಕೂಡ ಮನೆಯಲ್ಲಿ ಇದ್ದೆ. ನನ್ನ ತಂದೆ ಫ್ರಾ.ಸಾ.1 ರವರು ಈ ಪ್ರಕರಣದ ಆರೋಪಿ ಹಾಗೂ ಇತರರ ವಿರುದ್ದ ಇನ್ನೊಂದು ಜಾತಿ ನಿಂದನೆ ಪ್ರಕರಣ ಕೂಡ ದಾಖಲಿಸಿರುತ್ತಾರೆ ಎಂದರೆ ಸರಿ. ಅದೇ ರೀತಿ ನನ್ನ ತಂದೆಯವರು ಬೇರೆಯವರ ವಿರುದ್ಧವೂ ಕೂಡ ಜಾತಿ ನಿಂದನೆ ಮಾಡಿದ್ದಾರೆ ಎಂದು ಎರಡು ಮೂರು ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ.

ಸಹಜವಾಗಿ ಓರ್ವ ವ್ಯಕ್ತಿಯು ಇನ್ನೋರ್ವ ವ್ಯಕ್ತಿಯ ಧ್ವನಿಯನ್ನು ಅನುಕರಿಸಿ ಮಿಮಿಕ್ರಿ ಮಾಡಬಹುದು ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ನನ್ನ ತಂದೆಗೆ ಯಾವ ನಂಬರಿನ ಮೂಲಕ ಕರೆ ಬಂದಿತ್ತು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದೂರವಾಣಿ ಯಾರಿಗೆ ಸಂಬಂಧಿಸಿದ್ದು ಎನ್ನುವ ಕುರಿತು ಕೂಡ ನಾನು ಹೇಳಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ.10 ಪೆನ್ ಡ್ರೈವ್ ನಲ್ಲಿ ನಡೆದಂತಹ ಸಂಭಾಷಣೆಯೆಂದು ಮುಖ್ಯ ವಿಚಾರಣೆಯಲ್ಲಿ ತೋರಿಸಿದ ಅಂಶಗಳಲ್ಲಿ ಎಲ್ಲಿಯೂ ಜಾತಿ ನಿಂದನೆ ಮಾಡಿದ ಕುರಿತು ಕಂಡುಬರುವುದಿಲ್ಲ ಎಂದರೆ ಸರಿ. ದಿಃ 26-11-2019 ರಂದು ಹಾಗೂ 27-11-2019 ರಂದು ಮಾಡಲಾದ ಎರಡು ಪಂಚನಾಮೆಗಳಿಗೆ ನಾನು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸಾಕ್ಷಿಯು ದಿಃ 26-11-2019 ರ ಪಂಚನಾಮೆಗೆ ನಾನು ಮನೆಯಲ್ಲಿ

ಸಹಿ ಮಾಡಿರುವುದಾಗಿ ನುಡಿದಿರುತ್ತಾರೆ. ನಿ.ಪಿ.13 ಕ್ಕೆ ತನಿಖಾಧಿಕಾರಿಯು ನಮ್ಮ ಮನೆಯ ಅಕ್ಕಪಕ್ಕದವರ ಸಹಿಯನ್ನು ಪಡೆದುಕೊಂಡಿದ್ದು ಇರುವುದಿಲ್ಲ. ನಮ್ಮ ತಂದೆಯವರು ಉಪಯೋಗಿಸುತ್ತಿದ್ದ ಮೊಬೈಲ್ ಗೆ ಎರಡು ಸಿಮ್ ಇರುತ್ತದೆ ಎಂದರೆ ಸರಿ. ಸಿಸಿ ಟಿವಿ ಪೂಟೇಜ್ ಅನ್ನು ಪಡೆದ ನಂತರ ಅದನ್ನು ಪ್ಯಾಕ್ ಮಾಡಿ ನನ್ನ ಸಹಿ ಪಡೆದಿದ್ದಾರೋ ಇಲ್ಲವೋ ನನಗೆ ನೆನಪಿರುವುದಿಲ್ಲ.

ಈ ಹಂತದಲ್ಲಿ ನಿ.ಪಿ.19 ಪೆನ್ ಡ್ರೈವ್ ಅನ್ನು ಪುನಃ ಲ್ಯಾಪ್ ಟ್ಯಾಪ್ ಗೆ ಅಳವಡಿಸಿ ಅದರಲ್ಲಿರುವ ದೃಶ್ಯಾವಳಿಗಳನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಕಂಡುಬರುತ್ತಿರುವ ವ್ಯಕ್ತಿಗಳು ಆರೋಪಿಯೇ ಎಂದು ನಿರ್ಧಿಷ್ಟವಾಗಿ ಗೋಚರಿಸುತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಆತನೇ ಆರೋಪಿ ಎಂದು ನುಡಿದಿರುತ್ತಾರೆ. ನಮ್ಮ ಮನೆಯಲ್ಲಿ ಅಳವಡಿಸಿರುವ ಸಿಸಿ ಟಿವಿಯಲ್ಲಿ ಒಂದು ತಿಂಗಳಿನ ದೃಶ್ಯಾವಳಿಗಳು ರೆಕಾರ್ಡ್ ಆಗುತ್ತಿದ್ದವು. ನಾನು ಸಿಸಿ ಟಿವಿ ಪೂಟೇಜ್ ಅನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ನಮ್ಮ ಮನೆಗೆ ಅಳವಡಿಸಲಾದ ಸಿಸಿ ಟಿವಿ ದೃಶ್ಯಾವಳಿಯು ಒಂದು ತಿಂಗಳ ದೃಶ್ಯಾವಳಿಯನ್ನು ರೆಕಾರ್ಡ್ ಮಾಡಿಕೊಳ್ಳುತಿತ್ತು ಎಂದು ಹೇಳಿದ್ದು ಇರುವುದಿಲ್ಲ. ನಿ.ಪಿ.15 ರಲ್ಲಿ ಯಾವುದೇ ಸಾರ್ವಜನಿಕರು ಕಂಡುಬರುತ್ತಿಲ್ಲ ಎಂದರೆ ಸರಿ. ಸದರಿ ದಿನ ಆರೋಪಿಯು ನಮ್ಮ ಮನೆಯ ಬಳಿ ಬಂದು ನನ್ನ ತಂದೆ ಫ್ರಾ.ಸಾ.1 ರವರಿಗೆ ಯಾವುದೆ ಜಾತಿ ನಿಂದನೆ ಮಾಡಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ ಹಾಗೂ ಅವಾಚ್ಯ ಶಬ್ದಗಳಿಂದ ಬೈದಿಲ್ಲ, ನನ್ನ ತಂದೆಯು ರಾಜಕೀಯ ದುರುದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನನ್ನ ತಂದೆಯೇ ದೂರುದಾರರಾದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹೇಳಿದ ರೀತಿಯಲ್ಲಿ ಯಾವುದೇ ಪ್ರಕರಣ ನಡೆದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.